**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 162/2019**

ಪಿ ಡಬ್ಲ್ಯೂ-1

**ದಿನಾಂಕ 17-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**
**ಪಾಟೀ ಸವಾಲು ಶ್ರೀ ಟಿ ಜಿ ಎದುರುದಾರರ ಪರ ವಕೀಲರುಃ**

ನಾನು ಹೊನ್ನಾವರದಲ್ಲಿ ವಾಸವಾಗಿದ್ದೇನೆ. ನಾನು ಈ ದಿನ ಬೆಂಗಳೂರಿನಿಂದ ಬಂದಿರುತ್ತೇನೆ ಮತ್ತು ನಾನು ಈ ಪ್ರಕರಣವನ್ನು ಬೆಂಗಳೂರಿನಿಂದ ಬಂದು ನಡೆಸುತ್ತಿದ್ದೇನೆ. ನಾನು ಪ್ರಸ್ತುತ ಬೆಂಗಳೂರಿನ ಚಾಮರಾಜ ಪೇಟೆಯಲ್ಲಿ ವಾಸವಾಗಿದ್ದೇನೆ. ನಾನು ಬೆಂಗಳೂರಿನಲ್ಲಿ ಯಾವುದೇ ಕೆಲಸಕ್ಕೆ ಹೋಗುತ್ತಿರುವುದಿಲ್ಲ. ನಾನು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ವಿಳಾಸ ಮ.ನಂ. 187, ಕಾಳಪ್ಪ ಬ್ಲಾಕ್, ಮಧುರಮ್ಮ ದೇವಸ್ಥಾನದ ಹತ್ತಿರ, ಶ್ರೀನಗರ ಚಾಮರಾಜ ಪೇಟೆ ಬೆಂಗಳೂರು ಆಗಿರುತ್ತದೆ.

ನಾನು ಬಿ.ಕಾಂ. ಪದವೀಧರಳಾಗಿರುತ್ತೇನೆ. ನನ್ನನ್ನು ಪೋಷಿಸಿಕೊಳ್ಳುವ ಸಾಮರ್ಥ್ಯ ಇದೆ ಎಂದರೆ ಸರಿ ಆದರೆ ನಾನು ಯಾವುದೇ ಕೆಲಸಕ್ಕೆ ಹೋಗುತ್ತಿರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ನನ್ನ ಹಾಗೂ ನಮ್ಮ ಸಂಬಂಧಿಕರ ವಿರುದ್ಧ ಎದುರುದಾರರ ಮತ್ತು ಅವರ ಕುಟುಂಬದ ಮೇಲೆ ಹಲ್ಲೆ ಮಾಡಿದ್ದಾಗಿ ಒಂದು ಪ್ರಕರಣ ವಿಚಾರಣೆಯಲ್ಲಿ ಇದೆ ಎಂದರೆ ಸರಿ. ನಾನು ಎದುರುದಾರರು ನಮ್ಮ ವಿರುದ್ಧ ದೂರನ್ನು ನೀಡಿದ್ದರಿಂದ ನಾನು ಆರೋಪಿತರ ವಿರುದ್ಧ ಮತ್ತೊಂದು ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ.

ನಾನು ಬಿ.ಕಾಂ. ಪದವೀಧರಳಾಗಿರುದರಿಂದ ನನ್ನ ಗಂಡನನ್ನು ಬಿಟ್ಟು ಅವರು ಸರಿ ಹೊಂದುವುದಿಲ್ಲ ಎಂದು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಅಲ್ಲೇ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ವಿರುದ್ಧ ಜೀವನವನ್ನು ಬಂದು ನಡೆಸುವಂತೆ ಒಂದು ಅರ್ಜಿಯನ್ನು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಾನು ಬೆಂಗಳೂರಿನಲ್ಲಿ ವಾಸವಾಗಿರುವುದರಿಂದ ಎದುರುದಾರರು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ನೋಟೀಸ್ ನನಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ಸಂಬಂಧಿಕರು ಹೊನ್ನಾವರದಲ್ಲಿ ವಾಸವಾಗಿದ್ದಾರೆ. ಎದುರುದಾರರಿಗೆ ವಯಸ್ಸಾದ ತಂದೆ ಮತ್ತು ತಾಯಿ ಸಹ ಇದ್ದಾರೆ ಎಂದರೆ ಸರಿ. ಅವರನ್ನು ಸಹ ಎದುರುದಾರ ಚಿದಾನಂದ ನೋಡಿಕೊಳ್ಳಬೇಕು ಎಂದರೆ ಸರಿ.

ಬೆಂಗಳೂರಿಗೆ ಎದುರುದಾರರು ಬಂದು ನನ್ನನ್ನು ಕುರಿತು ಬಂದು ಅವರು ಜೊತೆ ಜೀವನ ನಡೆಸಲು ಕರೆದಿರುತ್ತಾರೆ ಎಂದರೆ ಸರಿಯ್ಲ್ಲ. ಸಾಕ್ಷಿ ಮುಂದುವರೆದು ಮಗುವನ್ನು ನೋಡಿಕೊಂಡು ಹೋಗಲು ಬಂದಿರುತ್ತಾರೆ. ಎದುರುದಾರರು ನನ್ನನ್ನು ಅವರ ಜೊತೆ ಜೀವನ ನಡೆಸಲು ಕರೆದರು ಸಹ ನಾನು ಬೇರೆ ಮದುವೆಮಾಡಿಕೊಳ್ಳುವುದಾಗಿ ತಿಳಿಸಿ ಎದುರುದಾರರ ಜೊತೆ ಬಾಳ್ವೆ ಮಾಡಲು ನಾನೇ ನಿರಾಕರಿಸಿರುತ್ತೇನೆ ಎಂರದೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರೇ ಇನ್ನೊಂದು ಮದುವೆ ಯಾಗಿರುತ್ತಾರೆ ಎಂದು ತಿವಿಳಿಸಿರುತ್ತಾರೆ.

ನಾನು ಬೇರೆಯವರ ಜೊತೆ ವಿವಾವ್ಯವೇತರ ಜೊತೆ ಸಂಬಂಧವನ್ನು ಹೊಂದಿ ಅವರ ಜೊತೆ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಹಲವಾರು ಪ್ರಕರಣಗಳಲ್ಲಿ ವಿಚಾರಣೆ ಹಂತದಲ್ಲಿ ಇರುವುದರಿಂದ ನಾನು ನನ್ನ ದಾಖಲೆಗಳಲ್ಲಿ ಎದುರುದಾರರ ಹೆಸರನ್ನು ಬದಲಾಯಿಸಿರುವುದಿಲ್ಲ ಮತ್ತು ನಾನು ವಾಸವಾಗಿರುವ ವ್ಯಕ್ತಿಯ ಹೆಸರನ್ನು ಸದರಿ ದಾಖಲೆಗಳಲ್ಲಿ ಸೇರಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಎದುರುದಾರರು ಒಪ್ಪಿಕೊಂಡರೆ ಅವರಿಗೆ ವಿವಾಹ ವಿಚ್ಛೇದನ ಕೊಡಲು ಸಿದ್ಧಳಿದ್ದೇನೆ ಎಂದರೆ ಸರಿ. ಎದುರುದಾರರು ಕಿಡ್ನಿ ಮತ್ತು ಆಲ್ಲಸರ್ ಎಂಬ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಆ ಬಗ್ಗೆ ಅವರು ನನಗೆ ಹೇಳಿರುವುದಿಲ್ಲ. ನಾನು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಜೀವನವನ್ನುಸಾಗಿಸಲು ಶಕ್ತಳಾಗಿರುವ ಕಾರಣ ನಾನು ಎದುರುದಾರರಿಂದ ಯಾವುದೇ ಜೀವನಾಂಶವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಎದುರುದಾರರ ಜೊತೆ  ನನ್ನ ಮಗುವನ್ನು ಚೆನ್ನಾಗಿ ನೋಡಿಕೊಳ್ಳಲು ಸಿದ್ದರಿದ್ದು ನಾನು ಮಗುವನ್ನು ಕಳುಹಿಸಿಕೊಡಲು ಯಾವುದೇ ತೊಂದರೆ ಇರುವುದಿಲ್ಲ ನನ್ನ ಮಗು ಇಷ್ಟ ಪಟ್ಟರೆ ಎದುರುದಾರರ ಜೊತೆ ಕಳುಹಿಸಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

ಈ ಹಂತದಲ್ಲಿ  ಎದುರುದಾರರ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ